


International Journal of Kannada Research
www.kannadajournal.com

**ISSN: 2454–5813**
IJKR 2023; 9(3): 111-113
© 2023 IJKR
www.kannadajournal.com
Received: 20-06-2023
Accepted: 23-07-2023

**ಡಾ. ಸಿದ್ದಯ್ಯ ರೆಡ್ಡಿಹಳ್ಳಿ**
ವಿಶೇಷ ವರದಿಗಾರರು
ಸತ್ಯ ಅನ್ವೇಷಣೆ ಪಾಕ್ಷಿಕ ಪತ್ರಿಕೆ
ತುಮಕೂರು ಜಿಲ್ಲೆ
ಕರ್ನಾಟಕ ರಾಜ್ಯ, ಭಾರತ

**Corresponding Author:**
**ಡಾ. ಸಿದ್ದಯ್ಯ ರೆಡ್ಡಿಹಳ್ಳಿ**
ವಿಶೇಷ ವರದಿಗಾರರು
ಸತ್ಯ ಅನ್ವೇಷಣೆ ಪಾಕ್ಷಿಕ ಪತ್ರಿಕೆ
ತುಮಕೂರು ಜಿಲ್ಲೆ
ಕರ್ನಾಟಕ ರಾಜ್ಯ, ಭಾರತ

# ಕನ್ನಡಿಗರಿಗೆ ಅಮೂರ್ತ ಸಾಂಸ್ಕೃತಿಕ ಪರಂಪರೆ ಇಲ್ಲವೇ!!?

**ಡಾ. ಸಿದ್ದಯ್ಯ ರೆಡ್ಡಿಹಳ್ಳಿ**

**DOI:** https://doi.org/10.22271/24545813.2023.v9.i3b.871

**ಪೀಠಿಕೆ**

ಮನುಷ್ಯನಿಗೆ ಅರಿವು ಬಂದಾಗಿನಿಂದ ಅವನು ಆಹಾರ ಮತ್ತು ವಸತಿಗೆ ಮಾತ್ರವೇ ಸೀಮಿತಗೊಳ್ಳದೇ, ಅವುಗಳಿಗಿಂತಲೂ ಮೇಲಿನ ಸ್ತರಕ್ಕೆ ಹೋಗಲು ಪ್ರಯತ್ನಿಸುತ್ತಿದ್ದಾನೆ. ಈವೊಂದು ಸೃಜನಾತ್ಮಕವಾದ ಬೆಳವಣಿಗೆಯಿಂದಾಗಿ ಕಲೆ, ಸಂಗೀತ, ನೃತ್ಯ ಮತ್ತು ಅಭಿವ್ಯಕ್ತಿಯ ಮಾಧ್ಯಮಗಳು ರೂಪುಗೊಂಡಿವೆ. ಜನಪದರ ಅಭಿವ್ಯಕ್ತಿಗಳು ಬರವಣಿಗೆಯ ಆವಿಷ್ಕಾರಕ್ಕೂ ಮುಂಚೆಯೇ ವಿಕಸನಗೊಂಡಿವೆ. ಆದ್ದರಿಂದಲೇ ನಮ್ಮ ಪೂರ್ವಿಕರ ಜ್ಞಾನದ ಸಂಪತ್ತು, ಪದ್ಧತಿಗಳು, ಸಂಪ್ರದಾಯಗಳು, ಕಥೆಗಳು ಮತ್ತು ನಂಬಿಕೆಗಳು ಪೀಳಿಗೆಯಿಂದ ಪೀಳಿಗೆಗೆ ಮೌಖಿಕವಾಗಿ ರವಾನೆಗೊಂಡಿವೆ. ಜನಪದರ ಜ್ಞಾನ, ಸಂಸ್ಕೃತಿ ಮತ್ತು ಅವರ ಸಾಮಾಜಿಕ ಕಾಳಜಿಗಳು ಮುಂದಿನ ಪೀಳಿಗೆಗೂ ಮುಂದುವರಿಯಬೇಕು ಎಂಬುದು ಎಲ್ಲರ ಆಶಯ. 'ಜಾನಪದವನ್ನು ಮುಂದಿನ ಪೀಳಿಗೆಗೆ ದಾಟಿಸುವುದು ಎಂದರೆ, ಜಾನಪದವನ್ನು ಹೆಚ್ಚು ಹೆಚ್ಚು ಜೀವಂತವಾಗಿರಿಸುವುದು' ಎಂದೇ ಅರ್ಥ. ಜಾನಪದವನ್ನು ಜೀವಂತವಾಗಿರಿಸಿ, ಅದು ಕಾಲಕ್ಕೆ ತಕ್ಕಂತೆ ಒಗ್ಗಿಕೊಳ್ಳುವಂತೆ ಅನುವು ಮಾಡಿಕೊಡಬೇಕಾಗಿದೆ. ಜನರು ತಮ್ಮ ಬುದ್ಧಿವಂತಿಕೆಯನ್ನು ತಮ್ಮ ಮುಂದಿನ ತಲೆಮಾರಿಗೆ ರವಾನಿಸುವುದಕೋಸ್ಕರ ಕಲೆ ಮತ್ತು ಸಂಸ್ಕೃತಿಯನ್ನು ರೂಢಿಗೆ ತಂದರು ಎಂಬ ಸತ್ಯವನ್ನು ಅರಿತುಕೊಳ್ಳಬೇಕು.

ಕರ್ನಾಟಕವು ಜಾನಪದ ಕಲೆಗಳ ಶ್ರೀಮಂತ ಪರಂಪರೆಯನ್ನು ಹೊಂದಿದೆ. ನಮ್ಮ ಮೂಲ ಬೇರುಗಳೊಂದಿಗೆ ನಮ್ಮನ್ನು ಸಂಪರ್ಕಿಸುವಂತೆ ಮಾಡುವ ಮತ್ತು ಕಾಲದ ಕಂದಕಕ್ಕೆ ಸೇತುವೆಯನ್ನು ನಿರ್ಮಿಸಿಕೊಡುವ ಒಂದು ಅದ್ಭುತ ಲೋಕವೇ ಜಾನಪದ. ಜಾನಪದ ಸಂಗೀತ ಮತ್ತು ನೃತ್ಯವು ಕರ್ನಾಟಕದ ಕಲೆ ಮತ್ತು ಸಂಸ್ಕೃತಿಯ ಜೀವಾಳವಾಗಿದೆ. ಹಾಗೆಯೇ ಕರ್ನಾಟಕವು ಜಾನಪದ ಸಂಗೀತ ಮತ್ತು ನೃತ್ಯದ ದೊಡ್ಡ ಪರಂಪರೆಯನ್ನು ಹೊಂದಿದೆ. ಕರುನಾಡು ಭಾರತೀಯ ಜಾನಪದಕ್ಕೆ ವಿಶಿಷ್ಟವಾದ ಕೊಡುಗೆಯನ್ನು ನೀಡುವುದರ ಮೂಲಕ ಪರಿಪೂರ್ಣತೆಯನ್ನು ನೀಡಿದೆ ಎಂದು ಹೇಳಬಹುದು. ಜಾನಪದ ಎನ್ನುವುದು ನಮ್ಮ ಶಾಶ್ವತವಾದ ಶ್ರೀಮಂತ ಪರಂಪರೆಯಾಗಿದೆ ಎಂಬುದನ್ನು ಮರೆಯಬಾರದು. ಜಾನಪದವು ಭೂತಕಾಲದೊಂದಿಗೆ ನಮ್ಮನ್ನು ಬೆಸೆಯುವ ಸಂಪರ್ಕ ಸೇತುವೆಯಾಗಿರುವಾಗ ಅದರ ಮಹತ್ವವನ್ನು ಮುಂದಿನ ತಲೆಮಾರಿಗೆ ತಿಳಿಸಿಕೊಡುವುದು ಅಷ್ಟೇ ಮುಖ್ಯವಾಗಿರುತ್ತದೆ.

ಲಂಡನ್ನಿನ ನಿಯತಕಾಲಿಕವಾದ 'ಅಥೆನಿಯಮ್'ನಲ್ಲಿ 1846 ಆಗಸ್ಟ್ 22ರ ಸಂಚಿಕೆಯಲ್ಲಿ ಪ್ರಕಟವಾಗಿದ್ದ ತಮ್ಮ ಲೇಖನದಲ್ಲಿ 'ವಿಲಿಯಮ್ ಜಾನ್ ಥಾಮ್ಸ್' ಅವರು ಮೊದಲ ಬಾರಿಗೆ 'ಫೋಕ್‌ಲೋರ್' (Folklore) ಎಂಬ ಪದವನ್ನು ಬಳಸಿದ್ದರು. ಜಾನಪದ ಎಂಬುದರ ಸಂವಾದಿಯಾದ ಈ ಪದ ಚಾಲ್ತಿಗೆ ಬಂದ ದಿನವನ್ನೇ 'ವಿಶ್ವ ಜಾನಪದ ದಿನ'ವನ್ನಾಗಿ ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆ(ಯುನೆಸ್ಕೊ)ಯ ಸಹಕಾರದೊಂದಿಗೆ ಆಚರಿಸಲಾಗುತ್ತಿದೆ. ಈ ದಿನವು ಜಗತ್ತಿನಾದ್ಯಂತ ಜಾನಪದ ಸಂಪ್ರದಾಯಗಳ ಬಗ್ಗೆ ಜಾಗೃತಿ ಮೂಡಿಸುವ ಗುರಿಯನ್ನು ಹೊಂದಿದೆ. ಎಲ್ಲಾ ದೇಶಗಳು ಈ ದಿನದಂದು ತಮ್ಮಲ್ಲಿನ ಜಾನಪದ ಪರಂಪರೆಗಳು, ಜನಪದ ಕಲೆಗಳನ್ನು ಸಂಭ್ರಮಿಸುತ್ತವೆ. ಆದ್ದರಿಂದಲೇ ಕಲೆಗಳ ಇತಿಹಾಸ ಮತ್ತು ಮಹತ್ವವನ್ನು ತಿಳಿಯುವುದು ಇಂದಿನ ತುರ್ತಾಗಿದೆ. ಜಾನಪದವು ನಮ್ಮ ಪೂರ್ವಿಕರ ಶ್ರೀಮಂತ ಜ್ಞಾನ ಪರಂಪರೆಯಾಗಿದೆ ಎಂಬುದರಲ್ಲಿ ಅನುಮಾನವಿಲ್ಲ. ಹಾಗಾಗಿ ಜಾನಪದ

ಕಲೆ ಮತ್ತು ಸಂಸ್ಕೃತಿಯ ಮಹತ್ವವನ್ನು ಜನರಿಗೆ ತಿಳಿಸಲು ಜಾನಪದ ದಿನಾಚರಣೆಯು ಮುಖ್ಯ ಭೂಮಿಕೆಯಾಗಿದೆ. ನಮ್ಮ ಕಲೆ ಮತ್ತು ಸಂಸ್ಕೃತಿಯ ಬಗೆಗೆ ಜನಜಾಗೃತಿಯನ್ನು ಮೂಡಿಸಲು ಜಾನಪದ ದಿನಾಚರಣೆ ನೆರವಿಗೆ ಬರುತ್ತದೆ. ಸಮಾಜದ ಸಂಪ್ರದಾಯ ಮತ್ತು ಪರಂಪರೆಯ ಸಾಂಸ್ಕೃತಿಕ ಗುಣಗಳನ್ನು ಮರುಸ್ಥಾಪಿಸುವುದಕ್ಕೆ ಜಾನಪದ ದಿನಾಚರಣೆಯಿಂದ ಸಾಧ್ಯವಾಗುತ್ತದೆ. ಕಲಾವಿದರು ತಮ್ಮ ಬಗೆಗೆ, ತಮ್ಮ ಕಲೆಯ ಬಗೆಗೆ ಹೆಮ್ಮೆಯನ್ನು ಹೊಂದಲು ಇದರಿಂದ ಸಾಧ್ಯ. ಜಾನಪದವು ಕಲೆಗಳ ಮೂಲಕ ಮೌಲ್ಯಗಳನ್ನು ಪೀಳಿಗೆಯಿಂದ ಪೀಳಿಗೆಗೆ ರವಾನಿಸುತ್ತದೆ, ಬುದ್ಧಿವಂತಿಕೆ ಮತ್ತು ಜಾಣ್ಮೆಗಳನ್ನು ಕಲಿಸುತ್ತದೆ. ಹಾಗಾಗಿ ಸಂಪ್ರದಾಯಗಳು, ಸಂಸ್ಕೃತಿ ಮತ್ತು ನಂಬಿಕೆಗಳು ಮುಂದಿನ ಪೀಳಿಗೆಗೆ ಆನಂದವನ್ನು ನೀಡುತ್ತವೆ. ಇಂತಹ ಉಪಯುಕ್ತ ಸಂಸ್ಕೃತಿಯು ಕಣ್ಮರೆಯಾಗುತ್ತಿರುವಾಗ ಅದನ್ನು ಜೀವಂತವಾಗಿಡುವುದಕ್ಕೆ ವಿಶ್ವ ಜಾನಪದ ದಿನಾಚರಣೆ ಸಹಾಯಕವಾಗುತ್ತದೆ.

ನಮ್ಮ ಜನಪದರಲ್ಲಿ ಹಲವರು ಮುಖ್ಯವಾಹಿನಿಗೆ ತಮ್ಮ ದಾರಿಯನ್ನು ಕಂಡುಕೊಂಡರು. ಆದರೆ ಜೀವನ ಸಂಸ್ಕೃತಿ ಮತ್ತು ಜೀವನಶೈಲಿಯನ್ನು ಉಸಿರಾಗಿಸಿಕೊಂಡಿರುವ ಸಣ್ಣ ಸಮುದಾಯಗಳು, ಸಾಮಾನ್ಯವಾಗಿ ಬುಡಕಟ್ಟು ಸಮುದಾಯಗಳು ತಮ್ಮ ಸಾಂಸ್ಕೃತಿಕ ಶ್ರೀಮಂತ ಪರಂಪರೆಯನ್ನು ಉಳಿಸಿಕೊಂಡಿವೆ. ನಮ್ಮ ಜನಪದ ಸಂಸ್ಕೃತಿ ಮತ್ತು ಪರಂಪರೆಯು ನಿಗೂಢ ಸ್ವರೂಪದಲ್ಲಿದ್ದು, ಎಷ್ಟೋ ಜನಪದ ಕಲೆಗಳು ಅಳಿವಿನ ಅಂಚಿನಲ್ಲಿರುವ ಇಂದಿನ ಸಂದರ್ಭದಲ್ಲಿ ಅವುಗಳನ್ನು ಜೀವಂತವಾಗಿಡಲು ಶ್ರಮಿಸಬೇಕಾಗಿರುವುದು ಸಹೃದಯರ ಆದ್ಯ ಕರ್ತವ್ಯವಾಗಬೇಕಾಗಿದೆ. ಹಿಂದೆ ಶಿಷ್ಟ ಸಾಹಿತ್ಯ ವೈದಿಕರ ಅಥವಾ ಮೇಲ್ಜಾತಿಯ ಪುರುಷರದಾಗಿತ್ತು. ಆದ್ದರಿಂದ ಯಾವುದೇ ಬದಲಾವಣೆಯಿಲ್ಲದೆ ಪರಂಪರಾನುಗತ ಮೇಲ್ಜಾತಿಯರ ಪರವಾದಂತಹ, ಸ್ತ್ರೀಯರ ವಿರೋಧಿಯಾದಂತಹ ಮೌಲ್ಯಗಳನ್ನೇ ಪುನಃ ಪುನಃ ಅಚ್ಚೊತ್ತುತ್ತಿದ್ದರು. ಆದರೆ ಜನಪದ ಸಾಹಿತ್ಯ ಕೆಳವರ್ಗದ, ಕೆಳಜಾತಿಯವರ ಧ್ವನಿಯಾಗಿದ್ದುದರಿಂದ ಪುರಾಣದಲ್ಲಿ ಬರುವ ಪಾತ್ರ ವರ್ಗಗಳನ್ನು ಹೊಸ ಆದರ್ಶಗಳಿಗನುಗುಣವಾಗಿ ಕಟ್ಟಿಕೊಂಡರು. ಅದಕ್ಕೆ ಉತ್ತಮ ಉದಾಹರಣೆ ಎಂದರೆ ಜನಪದ ರಾಮಾಯಣ. ಇದು ಮುಂದಿನ ತಲೆಮಾರುಗಳಿಗೆ ದಾರಿದೀಪವಾಗಬಹುದು.

ವಿಶ್ವದ ಜನಪದ ಕಲೆಗಳಿಗೆ ಯುನೆಸ್ಕೊವು 'ಅಮೂರ್ತ ಸಾಂಸ್ಕೃತಿಕ ಪರಂಪರೆ'ಯ ಸ್ಥಾನವನ್ನು ನೀಡುತ್ತದೆ. 180 ದೇಶಗಳು ತಮ್ಮ ಸಾಂಸ್ಕೃತಿಕ ಪರಂಪರೆಗಳ ಸಂರಕ್ಷಣೆ ಮತ್ತು ದಾಖಲೀಕರಣವನ್ನು ಹೊಂದಬಹುದಾಗಿದೆ. 2008ನೇ ವರ್ಷದಿಂದಲೂ ನಮ್ಮ ದೇಶದ ಬೇರೆ ಬೇರೆ ರಾಜ್ಯದ ಒಟ್ಟು 14 ಜನಪದ ಕಲಾರೂಪಗಳು ಮತ್ತು ಪರಂಪರೆಗಳಿಗೆ ಯುನೆಸ್ಕೊವಿನ 'ಅಮೂರ್ತ ಸಾಂಸ್ಕೃತಿಕ ಪರಂಪರೆ' ಮಾನ್ಯತೆ ದೊರೆತಿದೆ. ಜಾನಪದವನ್ನು ಜೀವಂತವಾಗಿರಿಸುವ ಸಲುವಾಗಿ ಪ್ರತಿವರ್ಷ 'ಅಮೂರ್ತ ಸಾಂಸ್ಕೃತಿಕ ಪರಂಪರೆ ಪಟ್ಟಿ'ಯೊಂದನ್ನು ಯುನೆಸ್ಕೊ ಪ್ರಕಟಿಸುತ್ತದೆ. ಈ ಪಟ್ಟಿಯಲ್ಲಿ ಜನಪದ ಕಲೆಗಳೂ ಸೇರಿದಂತೆ ಹಲವು ಪರಂಪರೆಗಳಿಗೆ ಈವರೆಗೆ ಸ್ಥಾನ ದೊರೆತಿದೆ. ಹೀಗೆ ಪಟ್ಟಿಯಲ್ಲಿ ಸ್ಥಾನ ದೊರೆತವುಗಳ ಜೀವಂತಿಕೆಗಾಗಿ ಯುನೆಸ್ಕೊ ಶ್ರಮಿಸುತ್ತದೆ. ಇದಕ್ಕಾಗಿ ಅನುದಾನವನ್ನೂ ಅದು ಬಿಡುಗಡೆ ಮಾಡುತ್ತದೆ.

ಅಮೂರ್ತ ಸಾಂಸ್ಕೃತಿಕ ಪರಂಪರೆಯು ಸ್ಥಗಿತವಾಗಬಾರದು. ಬದಲಿಗೆ ಅದು ತನ್ನ ಮೂಲ ಆಶಯಗಳೊಂದಿಗೆ ವರ್ತಮಾನದ ಸನ್ನಿವೇಶಗಳಿಗೆ ಪ್ರತಿಕ್ರಿಯಿಸುವ ರೀತಿಯಲ್ಲಿ ವಿಕಾಸವಾಗುತ್ತಾ ಹೋಗಬೇಕು ಮತ್ತು ಈ ಪ್ರಕ್ರಿಯೆಯಲ್ಲಿ ವೈವಿಧ್ಯಮಯ ಸಾಂಸ್ಕೃತಿಕ ಹಿನ್ನೆಲೆ ಇರುವ ಜನರು ಭಾಗಿಯಾಗುವಂತಿರಬೇಕು. ಕಾಲಾಂತರದಲ್ಲಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಲಸೆ ಬರುವ ಜನ, ಸಮೂಹವು ವಲಸೆ ಬಂದ ಪ್ರದೇಶದ ಸಾಮಾಜಿಕ, ಆರ್ಥಿಕ, ರಾಜಕೀಯ ಪರಿಸರಕ್ಕೆ ಒಗ್ಗಿಕೊಂಡು ತಮ್ಮ ಪರಂಪರೆಯನ್ನು ಮುಂದುವರಿಸುವುದು ಮತ್ತು ಅದನ್ನೇ ಮುಂದಿನ ಪೀಳಿಗೆ ದಾಟಿಸುವಂತಿರಬೇಕು. ಸಮುದಾಯವೊಂದು ಆಚರಿಸಿಕೊಂಡು ಬರುತ್ತಿರುವ ಪರಂಪರೆಯನ್ನು ತನ್ನದೇ ಸಮುದಾಯದ ಮುಂದಿನ ಪೀಳಿಗೆಗೆ ದಾಟಿಸುವುದು ಅಮೂರ್ತ ಸಾಂಸ್ಕೃತಿಕ ಪರಂಪರೆಯ ಮುಖ್ಯ ಉದ್ದೇಶವಾಗಿದೆ.

ಪರಂಪರೆಯು ಒಂದು ಸಮುದಾಯ ಅಥವಾ ಒಂದು ಜನರ ಗುಂಪಿಗೆ ಸೀಮಿತವಾಗಿರಬೇಕು. ಪರಂಪರೆ ಮತ್ತು ಸಮುದಾಯ ಅಥವಾ ಗುಂಪಿನ ಅಸ್ಮಿತೆ ಪರಸ್ಪರ ಅವಲಂಬಿತವಾಗಿರಬೇಕು. 'ಮೌಖಿಕ ಪರಂಪರೆ, ಪ್ರದರ್ಶನ ಕಲೆಗಳು, ಸಾಮಾಜಿಕ ಅಭ್ಯಾಸಗಳು, ಆಚರಣೆಗಳು, ಹಬ್ಬಗಳು, ನಿಸರ್ಗ ಅಥವಾ ಈ ಜಗತ್ತಿನ ಕುರಿತ ಜ್ಞಾನವನ್ನು ಅಥವಾ ಪಾರಂಪರಿಕ ಕರಕುಶಲ ಜ್ಞಾನ ಎಲ್ಲವನ್ನೂ ಅಮೂರ್ತ ಸಾಂಸ್ಕೃತಿಕ ಪರಂಪರೆ ಎಂಬ ವ್ಯಾಖ್ಯಾನ ಒಳಗೊಳ್ಳುತ್ತದೆ' ಎಂದು ಯುನೆಸ್ಕೊ ವಿವರಿಸಿದೆ. ಹೆಚ್ಚುತ್ತಿರುವ ಜಾಗತೀಕರಣದ ಕಾಲಘಟ್ಟದಲ್ಲಿ ಸಾಂಸ್ಕೃತಿಕ ವೈವಿಧ್ಯವನ್ನು ಉಳಿಸಿಕೊಳ್ಳಲು ಇಂಥ ಸಾಂಸ್ಕೃತಿಕ ಪರಂಪರೆಯು ಮುಖ್ಯವಾಗುತ್ತದೆ. ಯಾವುದೇ ಪರಂಪರೆ ಅಥವಾ ಜಾನಪದವು ಅದರ ಪ್ರದರ್ಶನ ಮಾತ್ರವಷ್ಟೇ ಅಲ್ಲ. ಅದರಲ್ಲಿ ಅಡಗಿರುವ ಜ್ಞಾನ ಸಂಪತ್ತು, ಕೌಶಲದ ಕಾರಣಕ್ಕೂ ಸಾಂಸ್ಕೃತಿಕ ಪರಂಪರೆಯು ಪ್ರಾಮುಖ್ಯ ಪಡೆಯುತ್ತವೆ. ಜನಪದರ ಜ್ಞಾನ, ಸಂಸ್ಕೃತಿ ಮತ್ತು ಅವರು ಹೊಂದಿದ್ದ ಸಾಮಾಜಿಕ ಕಾಳಜಿಗಳು ಮುಂದಿನ ತಲೆಮಾರುಗಳಿಗೆ ರವಾನೆಯಾಗಬೇಕು.

ಭಾರತದ ವಿವಿಧ ರಾಜ್ಯಗಳ ಜನಪದ ಕಲಾ ಪ್ರಕಾರಗಳಾದ 'ರಾಮಲೀಲಾ' (2008), 'ವೈದಿಕ ಪಠಣದ ಸಂಪ್ರದಾಯ' (2008), ಕೇರಳದ 'ಕುಟಿಯಟ್ಟಾಮ್' / 'ಕೂಡಿಯಾಟ್ಟಂ' (2008), ಹಿಮಾಚಲ ಪ್ರದೇಶದ 'ರಮ್ಮನ್' (2009), ಕೇರಳದ 'ಮುಡಿಯೇಟ್ಟು. (2010), ರಾಜಸ್ಥಾನದ 'ಕಲಿಬೇಲಿಯಾ ನೃತ್ಯ' (2010), ಪಶ್ಚಿಮ ಬಂಗಾಳದ 'ಚಾವು ನೃತ್ಯ' (2010), ಲಡಾಖ್‌ನ 'ಬೌದ್ಧಮಂತ್ರ ಪಠಣ' (2012), ಮಣಿಪುರದ 'ಸಂಕೀರ್ತನ' (2013), ಪಂಜಾಬ್‌ನ 'ಸಾಂಪ್ರದಾಯಿಕ ಹಿತ್ತಾಳೆ ಮತ್ತು ತಾಮ್ರದ ಪಾತ್ರೆ ತಯಾರಿಕೆ' (2014), 'ಯೋಗ' (2016), 'ನವ್ರೂಜ್' (2016), 'ಕುಂಭಮೇಳ' (2017), ಪಶ್ಚಿಮ ಬಂಗಾಳದ 'ದುರ್ಗಾಪೂಜಾ' (2021) ಎಂಬ ಕಲೆಗಳು ಅಮೂರ್ತ ಸಾಂಸ್ಕೃತಿಕ ಪರಂಪರೆ ಪಟ್ಟಿಯನ್ನು ಸೇರಿವೆ.

ಕರ್ನಾಟಕದ ಜಾನಪದ ಅಕಾಡೆಮಿಯು 32 ಜನಪದ ಕಲೆಗಳನ್ನು ಗುರುತಿಸಿದೆ. ಕರುನಾಡಿನ ಪ್ರತಿಯೊಂದು ಕಲೆಯು ಕೂಡ ಮಹತ್ವದ ಸಾಂಸ್ಕೃತಿಕ ಪರಂಪರೆಯನ್ನು ಪಸರಿಸುತ್ತಿವೆ. ಉದಾಹರಣೆಗೆ ಸಿದ್ಧಿ ಡಮಾಮಿ ನೃತ್ಯ, ಡೊಳ್ಳು ಕುಣಿತ, ಗೊರವರ ಕುಣಿತ, ತಮಟೆವಾದನ, ಪುರವಂತಿಕೆ ಮೇಳ, ಕೊಂಬು ಕಹಳೆ, ಜಗ್ಗಲಿಗೆ, ಕಂಗೀಲು ಕುಣಿತ, ಸೋಮನ ಕುಣಿತ, ನಗಾರಿ, ಪಟಾ ಕುಣಿತ, ಕರಗ ನೃತ್ಯ ಅಥವಾ ಶಕ್ತ್ಯುರ್ಸವ, ಕಂಸಾಳೆ ನೃತ್ಯ, ಹೆಜ್ಜೆಮೇಳ, ಪೂಜಾ ಕುಣಿತ, ಜಡೆ ಕೋಲಾಟ, ಕರಡಿ ಮಜಲು, ನಂದಿಕೋಲು ಕುಣಿತ ಅಥವಾ ನಂದಿಧ್ವಜ ಕುಣಿತ, ಕೀಲುಕುದುರೆ ಕುಣಿತ, ಕೋಲಾಟ, ನೀಲಗಾರರು, ಬುಡಬುಡುಕೆಯವರು, ಬಿಜಲಿವರಸೆ, ಮರಗಾಲು ಕುಣಿತ, ಕೊರವಂಜಿ, ಉರುಮೆವಾದನ, ವೀರಭದ್ರ ಕುಣಿತ, ಚೌಡಕಿ ವಾದ್ಯ, ಹುಲಿವೇಷ, ಲಂಬಾಣಿ ಕುಣಿತ, ರಂಗದ ಕುಣಿತ, ವೀರಗಾಸೆ ನೃತ್ಯ ಪ್ರಕಾರಗಳು ಕರ್ನಾಟಕದ ಸಂಸ್ಕೃತಿಯ ಶ್ರೀಮಂತಿಕೆಯನ್ನು ಹೆಚ್ಚಿಸಿವೆ. ಆದರೆ ಇವುಗಳಲ್ಲಿ ಒಂದೂ ಕೂಡ

15 ವರ್ಷಗಳಿಂದಲೂ ಯುನೆಸ್ಕೋದ ಅಮೂರ್ತ ಸಾಂಸ್ಕೃತಿಕ ಪರಂಪರೆ ಪಟ್ಟಿಗೆ ಸೇರದಿರುವುದು ವಿಷಾದನೀಯ.

ಈಗಾಗಲೇ ಗುಜರಾತಿನ ಗರ್ಬಾ ನೃತ್ಯವು ನಾಮನಿರ್ದೇಶನಗೊಂಡಿದೆ. ಆದರೆ ಕನ್ನಡಿಗರಾದ ನಾವು ಅಂತಹ ಯಾವುದೇ ಪ್ರಯತ್ನವನ್ನು ಮಾಡದೇ ಮುಂದಿನ ತಲೆಮಾರು ಕೀಳರಿಮೆಯಿಂದ ಬಳಲುವಂತೆ ಮಾಡುತ್ತಿದ್ದೇವೆ. ಅವರು ನಮಗೆ ಬೆರಳು ತೋರಿಸುವ ಮುಂಚೆ ನಾವು ಎಚ್ಚೆತ್ತುಕೊಳ್ಳಬೇಕಾಗಿದೆ. ಮುಂದಿನ ದಿನಮಾನಗಳಲ್ಲಿ ಕರ್ನಾಟಕದ ಕಲಾ ಪರಂಪರೆಗಳು ಮತ್ತು ಜನಪದ ಕಲೆಗಳು ಅಮೂರ್ತ ಸಾಂಸ್ಕೃತಿಕ ಪರಂಪರೆಯ ಪಟ್ಟಿಗೆ ಸೇರಲು ಕನ್ನಡಿಗರು, ವಿವಿಧ ಮಾಧ್ಯಮಗಳು, ಸಂಸ್ಕೃತಿ ಚಿಂತಕರೆಲ್ಲರೂ ಸೇರಿ ನಮ್ಮ ಸಾಂಸ್ಕೃತಿಕ ಪರಂಪರೆಯ ಬಗ್ಗೆ ಜಗತ್ತಿನ ಗಮನ ಸೆಳೆಯಬೇಕಾಗಿದೆ.

## References


1. ಕರ್ನಾಟಕ ಜಾನಪದ ಅಕಾಡೆಮಿ ಜಾಲತಾಣ
2. ಪ್ರಜಾವಾಣಿ ದಿನಪತ್ರಿಕೆ
3. ದಕ್ಷಿಣ ಭಾರತೀಯ ಜಾನಪದ ಕೋಶ; (ಪ್ರ.ಸಂ.) ಡಾ. ಎ. ಮುರಿಗೆಪ್ಪ ; ಕನ್ನಡ ವಿಶ್ವವಿದ್ಯಾಲಯ, ಹಂಪಿ.
4. ಯುನೆಸ್ಕೊ ಜಾಲತಾಣ